ಈ ಕಥೆಯಲ್ಲಿ ಬರುತ್ತವೆ. ಕಾಮನಹಬ್ಬವು ಸಾವಿತ್ರಮ್ಮ ಮತ್ತು ಶೀನಿಯರ ಬದುಕಿನ ಸಾಂಕೇತಿಕತೆಯನ್ನು ಸಮರ್ಥವಾಗಿ ಸೂಚಿಸುತ್ತದೆ. ಇಷ್ಟಿದ್ದರೂ ಸಮಗ್ರವಾಗಿ ನವೋದಯದ ಇನ್ನಿತರ ಕಥೆಗಾರರ ಹಾಗೆಯೇ ಮಾಸ್ತಿ ಕೂಡ 'ಆದರ್ಶತನಗಳನ್ನು' ಬಿಟ್ಟುಕೊಡಲಾರರು. ಜಿ.ಎಚ್. ನಾಯಕರು ಹೇಳುತ್ತಾರೆ: 'ಒಂದು ಗಾಢವಾದ ಧಾರ್ಮಿಕ ಶ್ರದ್ಧೆಯಿಂದ ಬದುಕಿನ ವ್ಯವಹಾರಗಳನ್ನೆಲ್ಲ ಪರಿಭಾವಿಸುವ, ವ್ಯಾಖ್ಯಾನಿಸುವ ಬೆಲೆಕಟ್ಟುವ ಸಾತ್ವಿಕ ಮನಸ್ಸು ಮಾಸ್ತಿ ವೆಂಕಟೇಶ ಅಯ್ಯಂಗಾರರ ಕಥೆಗಳಲ್ಲಿ ರೂಪು ತಳೆಯುವ ಅನುಭವವನ್ನು ನಿಯಂತ್ರಿಸುತ್ತಿರುವಂತೆ, ನಿರ್ದೇಶಿಸುತ್ತಿರುವಂತೆ ಬೋಧೆಯಾಗುತ್ತದೆ' ('ಕನ್ನಡ ಸಣ್ಣ ಕಥೆಗಳು', ಸಂ: ಜಿ.ಎಚ್. ನಾಯಕ. ಪ್ರಸ್ತಾವನೆಯ ಮಾತುಗಳಿಂದ). ಮುಂದೆ ಅವರು ತಾಳಿಕೆಯ ಗುಣವನ್ನು ಹೇಳುತ್ತಾರೆ. ಈ ಮಾತುಗಳನ್ನು ಬಹುಮಟ್ಟಿಗೆ ಒಪ್ಪಿಕೊಳ್ಳಬಹುದು. ಧಾರ್ಮಿಕ ಶ್ರದ್ಧೆ ಎನ್ನುವುದು ವ್ಯಕ್ತಿಗತವಾದದ್ದು. ಆದರೆ, ಮಾಸ್ತಿಯವರು ಇದನ್ನು ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಮಾಡಿದರೆ? ಜೀವನದರ್ಶನದಲ್ಲಿ ಕಾರಂತರ ಹಾಗೆ ವೈಚಾರಿಕತೆಯನ್ನು ತೀವ್ರವಾಗಿ ಒಳಗುಮಾಡಿದರೆ? ಎಂಬ ಪ್ರಶ್ನೆಗಳು ಬಂದರೆ, ಮಾಸ್ತಿ, ಕಾರಂತರಷ್ಟು ಮುಂದೆ ಹೋಗಿಲ್ಲ. ಸಂಪ್ರದಾಯವೆಂದರೆ ಇಲ್ಲಿ ಯಾವ ಸ್ವರೂಪದ್ದು? ಮಾಸ್ತಿಯವರ ಸ್ವಬದುಕಿನ ಪರಿಸರದ ಹಿನ್ನೆಲೆ ಒಂದು ಕೋನವಾದರೆ, ಮತ್ತೊಂದು, ಬಹುಸಮುದಾಯ ನಡೆಸಿಕೊಂಡು ಬಂದ ಸಂಸ್ಕೃತಿಯ ವಿಧಾನಗಳು. ಮಾಸ್ತಿಯವರು ಇವೆರಡರ ನಡುವೆ ಒಂದು ಮೌಲ್ಯವನ್ನು ಶೋಧಿಸಲು ಸದಾ ಯತ್ನಿಸುತ್ತಾರೆ. ಇವುಗಳಲ್ಲಿ ಬಿರುಕು ಉಂಟಾದರೂ ಜಿ.ಎಚ್. ನಾಯಕರೇ ಹೇಳುವಂತೆ – 'ಸಾಂಪ್ರದಾಯಿಕ ಚೌಕಟ್ಟಿನಲ್ಲೇ ಪರಿಹಾರಗಳನ್ನು ಹುಡುಕುತ್ತಾರೆ'. ಇದನ್ನು ಬೇರೊಂದು ಕ್ರಮದಲ್ಲಿ ಭಂಜಿಸಲು ಮತ್ತು ಬದುಕಿನ ಕೆಲ ಚೌಕಟ್ಟುಗಳನ್ನು ಲಂಘನ ಮಾಡಿದ್ದು ಅನಂತಮೂರ್ತಿಯವರು. ಇವರ ಕಥನಗಳಲ್ಲಿ ವೈಚಾರಿಕತೆಯ ಏನೇ ಗೊಂದಲಗಳಿದ್ದರೂ ತಮ್ಮ ಸುತ್ತಣ ಸಂಪ್ರದಾಯದ ಪರಿಸರದ ಬದುಕಿನ ಜೀವಗಳ ವಿಚಿತ್ರ ತಳಮಳಗಳನ್ನು, ತಲ್ಲಣಗಳನ್ನು ಮುಕ್ತವಾಗಿ ಅಭಿವ್ಯಕ್ತಿಸಿದರು. ಯಶವಂತ ಚಿತ್ತಾಲ, ಶಾಂತಿನಾಥ ದೇಸಾಯಿ, ಮುಂತಾದವರು ಮಾನಸಿಕ ಘರ್ಷಣೆಗಳ ಮುಖೇನ, ಬಿರುಕುಗಳ ದಾರಿಯಲ್ಲಿ ಬದುಕಿನ ಆವರಣವನ್ನು ಕಂಡರು.

## ಸ್ಥಳೀಯತೆ ಮತ್ತು ಪ್ರಾದೇಶಿಕತೆ

ಮಾಸ್ತಿಯವರು ಕನ್ನಡ ಕಥನಮಾರ್ಗವನ್ನು ಹಿಗ್ಗಿಸಲು ಎಲ್ಲ ರೀತಿಯಲ್ಲೂ ಮೈಸೂರು ಪ್ರಾಂತ್ಯದಲ್ಲಿ ಪ್ರಯತ್ನಮಾಡುತ್ತಿದ್ದರೆ, ಮತ್ತೊಂದು ಕಡೆ ಉತ್ತರಕನ್ನಡ, ದಕ್ಷಿಣಕನ್ನಡ, ಉತ್ತರ ಕರ್ನಾಟಕ ಮುಂತಾದ ಭಾಗಗಳಲ್ಲಿ ಚಾರಿತ್ರಿಕವಾಗಿ, ಪ್ರಾದೇಶಿಕವಾಗಿ, ಅದರಲ್ಲೂ 'ಸ್ಥಳೀಯ'ವಾಗಿ ತೀವ್ರವಾಗಿ ಕಥನಚೌಕಟ್ಟುಗಳನ್ನು ಅನೇಕರು ವಿಸ್ತಾರ ಮಾಡುತ್ತಾ ಇದ್ದರು. ಇಲ್ಲಿ ಕಥನಗಳ 'ಪ್ರಾದೇಶಿಕತೆ' ಮತ್ತು 'ಸ್ಥಳೀಯತೆ'ಗಳನ್ನು ಕೊಂಚ ವಿವರಿಸಿಕೊಳ್ಳಬೇಕಾದ ಅಗತ್ಯವಿದೆ. ಈ ಬಗ್ಗೆ ಕಥೆಗಾರ ಕೇಶವ ಮಳಗಿಯವರ ವ್ಯಾಖ್ಯಾನ: 'ಸ್ಥಳೀಯತೆ ಮತ್ತು ಪ್ರಾದೇಶಿಕತೆಗಳ ಅರ್ಥ ವಿಸ್ತಾರ ಬೇರೆ ಬೇರೆ. ದುರ್ದೈವವೆಂದರೆ ಕನ್ನಡದಲ್ಲಿ ಅವೆರಡನ್ನೂ ಒಂದೇ ಎಂಬಂತೆ ನೋಡಲಾಗುತ್ತದೆ. ಸ್ಥಳೀಯತೆ ಒಂದು ಬರಹಕ್ಕೆ ಭಾಷಾ ನಿಖರತೆ, ವಸ್ತು ಖಚಿತತೆ ಮತ್ತು ಪಾತ್ರ ವಿವರಗಳ ಒಳಗಿನ ಸೂಕ್ಷ್ಮತೆ, ಸೊಬಗು, ಒಳಾವರಣವನ್ನು ಒದಗಿಸುತ್ತದೆ. ಪ್ರಾದೇಶಿಕತೆಯು ಬರಹದ ಹೊರಗಿನ ಒಟ್ಟು ಚೌಕಟ್ಟನ್ನು ಸೃಷ್ಟಿಸುತ್ತದೆ. ಉತ್ತರ ಕನ್ನಡದ ಕುಮಟ ತಾಲ್ಲೂಕಿನ ಮಿರ್ಜಾನ್ ಸುತ್ತಮುತ್ತ ನಡೆಯಬಹುದಾದ ಕಥೆಯನ್ನು ಬಳ್ಳಾರಿ ಜಿಲ್ಲೆಯ ಸೊಂಡೂರಿನ ಸುತ್ತಮುತ್ತಲಿನ ಭಾಷೆ ಮತ್ತು ಪಾತ್ರಗಳಲ್ಲಿ ಕಟ್ಟಿಕೊಡಲಾಗುವುದಿಲ್ಲ.' ('ನೇರಳೆ ಮರ' ಕೃತಿಯಿಂದ). ಈ ಮಾತುಗಳು 'ಬಹುರೂಪತೆ'ಯ ರೂಪಕಗಳೇ ಆಗಿವೆ. ಪ್ರಾದೇಶಿಕ ಮತ್ತು ಸ್ಥಳೀಯತೆಗಳು ಯಾವುದೇ ಭಾಷಿಕ ಸಂಸ್ಕೃತಿಯ ಒಳತತ್ವಗಳೇ ಆದರೂ ಜಾತಿ, ಭಾಷೆ, ಒಟ್ಟು ಜೀವಿತಕ್ರಮಗಳ ಹಿನ್ನಲೆಗಳಲ್ಲಿ ಭಿನ್ನವಾಗಿಯೇ ಇರುತ್ತವೆ. ಇದನ್ನು ನಾವು ನಕಾರಾತ್ಮಕ ದೃಷ್ಟಿಯಿಂದ ನೋಡಬೇಕಾಗಿಲ್ಲ. ಬದಲಿಗೆ ಅದೊಂದು 'ವೈವಿಧ್ಯ' ಎಂದೇ ಭಾವಿಸಬೇಕು. ನವೋದಯದ ಆರಂಭದ ಒಟ್ಟು ಕಥನವನ್ನು ಸೂಕ್ಷ್ಮವಾಗಿ ಅವಲೋಕಿಸಿದರೂ